

ಮಾಡಿ ಇನ್ನಷ್ಟು ಇನ್ನಷ್ಟು ಉಣಿಸಿದಾಗಲೇ ತೃಪ್ತಿ. ಕೆಲಸದವರಿಗೆಲ್ಲ ಬಡಿಸಿ ಕೊಟ್ಟು, ಎರಡನೆಯ ಪಂಕ್ತಿಗೆ ಹೆಂಗಸರೆಲ್ಲ ಕುಳಿತಾಗ, ಊಟ ಮುಗಿಸಿದವರಲ್ಲಿ ಯಾರಾದರೊಬ್ಬರು ಊಟ ಬಡಿಸುವುದಕ್ಕೆ ನಿಲ್ಲುತ್ತಿದ್ದರು. ಕುಟುಂಬ ಸಣ್ಣದಾಗುತ್ತ ಆಗುತ್ತ ತಾವು ತಮ್ಮ ಮಕ್ಕಳು ಇಷ್ಟೇ ಇದ್ದಾಗಲೂ, ಗಂಡ ಮಕ್ಕಳನ್ನು ಕೂಡ್ರಿಸಿ ವಿಮಲಮ್ಮ ಪ್ರೀತಿಯಿಂದ ಜುಲುಮೆ ಮಾಡುತ್ತ ಉಣಿಸುವುದಿತ್ತು. ಮಕ್ಕಳು ಬೆಳೆದಂತೆ, ಅಭ್ಯಾಸ–ನೌಕರಿ ಎಂದು ಒಬ್ಬೊಬ್ಬರಾಗಿ ಗೈರಾಗುತ್ತ, ವಿದೇಶಗಳಿಗೆ ಹಾರಿಹೋಗಿ ಹೆಚ್ಚು ಕಡಿಮೆ ಅಲ್ಲಿಯವರೇ ಆಗಿಹೋದ ಮೇಲೆ, ಗಂಡ ಹೆಂಡತಿ ಇಬ್ಬರೇ ಟೇಬಲ್ಲಿನ ಆಚೀಚೆ ಒಬ್ಬರ ಮುಖ ಒಬ್ಬರು ನೋಡುತ್ತ ಊಟ ಮಾಡುವ ಪರಿಸ್ಥಿತಿ.

'ಯಾಕ... ಊಟಾ ಮಾಡವಲ್ಲೆಲಾ...' ಪುಟ್ಟ ಬೋಗುಣಿಯಿಂದ ಸಾರು ಬಡಿಸಿಕೊಳ್ಳುತ್ತ ವಾಮನರಾಯರು ಕೇಳಿದರು.

ವಿಮಲಮ್ಮ ತಮ್ಮ ಗುಂಗಿನಿಂದ ಹೊರಬರಲಾಗದೇ, 'ನಮ್ಮ ವಿಶೂಗ ಪಾಯಸಂದ್ರ ಎಷ್ಟ ಪ್ರೀತಿ. ವಿನೂ ಅಂತೂ ಹೋಳಿಗಿ ಅಂದ್ರ ಮೂಗು ಕೊಯ್ಸಿಕೋತಿದ್ದ. ವೀಣಾಗ ಮಾತ್ರ ಸೀಂ ಅಂದ್ರ ಅಷ್ಟಕಷ್ಟ... ಅಕಿ ಮಸಾಲಿ ಅನ್ನದ ಭಕ್ತಳು. ಎಲ್ಲಾರೂ ಒಂದೊಂದ ದಿಕ್ಕಿಗೆ ಹೋಗಿ ಕೂತಾರ. ಏನ ಮಾಡಿಕೊಂಡ ತಿಂತಾವೋ ಏನೊ... ಹಬ್ಬ ಅನ್ನೂದರ ನೆನಪರ ಇರತದೊ ಇಲ್ಲೊ... ಹುಡುಗರ್ನೆಲ್ಲಾ ಬಿಟ್ಟು ಉಣಲೀಕತ್ರ ತುತ್ತು ಗಂಟಲಾದಾಗ ಹ್ಯಾಂಗ ಇಳೀತದ... ನೀವ ಹೇಳ್ರಿ' ಎಂದು ಮುಖ ಬಾಡಿಸಿಕೊಂಡರು.

'ನೀನೂ ಸುಮ್ನ ಇಲ್ಲದ್ದ ಚಿಂತಿ ಮಾಡಾಕಿ ನೋಡು. ನೀ ಹೀಂಗ ಎಲಿ ಮುಂದ ಕೂತು ಉಪಾಸ ಮಾಡೀದ್ರ ಹೋಳಿಗಿ ಪಾಯಸ ಅವ್ರ ಎಲಿವಳಗ ಹೋಗಿ ಬೀಳ್ತಾವೇನು? ಸುಮ್ನ ಊಟಾ ಮಾಡು. ತಮಗ ಬೇಕಂದ್ರ ಮಾಡಿಕೊಂಡು ತಿಂತಾರ. ಇಲ್ಲಾ, ಕೊಂಡ ತಂದ ತಿಂತಾರ.'

'ಅಯ್ಯ... ಅಲ್ಲೆಲ್ಲಾ ಹೋಳಿಗಿ ಪಾಯಸಾ ಹೊರಗೆಲ್ಲಿ ಸಿಗಬೇಕ್ರೀ ಕೊಂಡ ತರಲಿಕ್ಕೆ? ಇನ್ನ, ಮನ್ಯಾಗ ಮಾಡಿಕೋಳಿಕ್ಕೆ ಟೈಮ್ ಎಲ್ಲಿದ ಅವಕ್ಕ? ಗಂಡಾ ಹೇಣ್ತಿ ಇಬ್ರೂ ದುಡಿಯವ್ರು... ಇದ್ದ ಒಂದೊಂದು ಮಕ್ಕಳ್ನ ಸಂಭಾಳ್ಸೂದ್ರಾಗನ ಕುರಿ ಕ್ವಾಣಾ ಬಿದ್ದಹೋಗತದ. ಅದೇನೊ ಮಾಲ್ ಅಂತಾರಲಾ... ಅಲ್ಲಿಂದ ತಂಗಳ ಚಪಾತಿ ಅದೂ ಇದೂ ಅಂತ ಹೊತಗೊಂಡ ಬರೂದದ, ಬಿಸಿ ಮಾಡಿಕೊಂಡು ತಿನ್ನೂದದ. ಅವನ್ನೆಲ್ಲಾ ಎಂದ ಮಾಡಿ ಇಟ್ಟಿರತಾರೊ ಏನೊ ದೇವ್ರ ಬಲ್ಲಾ. ರುಚಿ ಹ್ಯಾಂಗ ಬರಬೇಕು? ಮನ್ನೆ ಫೋನ ಮಾಡಿದಾಗ ವಿಶೂ ಹೇಳ್ಳಿಕತ್ತಿದ್ದಾ... ಅವ್ವಾ, ನೀ ಶ್ಯಾವಿಗಿ ಕೊಟ್ಟ ಕಳಿಸಿದ್ದೆಲಾ... ಮನ್ನೆ ಖೀರ ಮಾಡಿದ್ವಿ. ಆದ್ರ ನೀ ಮಾಡಿದಂಗ ಆಗಿದ್ದಿಲ್ಲ ನೋಡು. ಅದರಾಗ ಆ ವಣಾವಣಾ ಚಪಾತಿ ಜೋಡಿ ಅಂತೂ ಏನೇನೂ ಥೊಲೊ ಹತ್ತಲಿಲ್ಲಾ. ನೀ ಮಾಡೂ ಬಿಸಿಬಿಸಿ ಚಪಾತಿ ಅಂದ್ರ ರೇಶಮೀಗತೆ ಇರತಾವ... ಅಂತ... ... ಇನ್ನ ವಿನೂಗಂತೂ ಹೋಳಿಗಿ ಸುದ್ದೀನ ಇಲ್ಲಾ. ಅವನ ಹೇಣ್ತೀಗೆ ಮಾಡಲಿಕ್ಕೂ ಬರಂಗಿಲ್ಲಾ, ಹೊರಗೂ ಸಿಗಂಗಿಲ್ಲಾ...'

'ನಿನಗ ಅಡಿಗಿ ಊಟಾ ಉಂಡಿ ಚಕ್ಲಿ ಬಿಟ್ಟು ಹೆಚ್ಚಿಂದು ತಲ್ಯಾಗ ಬರೂದ ಇಲ್ಲ ನೋಡು. ಫೋನನ್ಯಾಗೂ ಬರೇ ಇದನ್ನ ಮಾತಾಡತಿರ್ತಿ... ಊಟ ಆತೇನೂ... ನಾಷ್ಟಾ ಆತೇನೂ... ಏನ ತಿಂದ್ರೀ ಅಂತ. ಈಗಿನ ಹುಡುಗ್ರು ಕಂಪ್ಯೂಟರ್ ಕೆಲಸಾ ಮಾಡಿಕೋತನ, ಪಿಜ್ಜಾ ಬರ್ಗರ್ ಅಂತ ಹಾಳಿವಳಗ ಸುತ್ತಿದ್ದೇನೊ ತಿಂತಿರತಾವ. ಅವಕ್ಕ ಅದರ ಕಡೆ ಲಕ್ಷ ಸೈತ ಇರೂದುಲ್ಲಾ...'

'ಅದಕ್ಕ... ಕೆಟ್ಟ ಅನಸ್ತದ್ರೀ... ತಿನ್ನೂ ಉಣ್ಣೂ ವಯಸ್ಸು... ತಿನಬೇಕು ಅನಸತದ, ಆದ್ರ ಸಾಧ್ಯ ಇಲ್ಲಾ. ಅದಕ್ಕ... ಸೂಟಿಗೆ ಇಲ್ಲೆ ಬರೂಮುಂದ, ಅವ್ವಾ ಇವನೆಲ್ಲಾ ಮಾಡಿಹಾಕಬೇಕ ನೋಡು... ತಿಂದು ಭಾಳದಿವ್ಸ ಆತು ಅಂತ ಇಷ್ಟುದ್ದ ಲಿಸ್ಟ ಕೊಟ್ಟಿರತಾರ. ಅವ್ರು ಬಾಯಿ ಚಪ್ಪರ್‍ಸ್ಕೋತ ತಿನ್ನೂದ ನೋಡೀದ್ರ ನನ್ನ ಹೊಟ್ಟಿ ತುಂಬಿದಂಗ ಆಗ್ತದ. ವೀಣಾನ್ನ ನೋಡೀರಿಲ್ಲೊ... ಅವ್ವಾ... ಇದನ್ನ ಹ್ಯಾಂಗ ಮಾಡೂದು ಅದನ್ನ ಹ್ಯಾಂಗ ಮಾಡೂದು ಅಂತ ಫೋನ ಮಾಡಿ ಕೇಳೇಕೇಳತಿರತಾಳ. ಮದಲಿನಿಂದ ತಿಂದ ಉಂಡ ಬೆಳದವ್ರು... ನಾಲಿಗಿ ಆ ರುಚಿಗೆ ಹಪಹಪಸ್ತದ...'

'ಹಾರಿ ಹೋಗಿ ಎಲ್ಲೆಲ್ಲೊ ಕೂತಾವಲಾ... ನಾವೇನ್ ಮಾಡೂದು? ಇಲ್ಲೇ ಇದ್ರ ಎಲ್ಲಾ ಸಿಗತಿತ್ತು. ನಮ್ಮ ದೇಶದಾಗ ಸಿಗಲಾರದ್ದು ಏನ ಅದ... ನೀನ ಅವಕ್ಕ... ಕುಮ್ಮಕ್ಕು ಕೊಟ್ಟಾಕಿ...'

'ಆಂ ಆಂ... ಮತ್ತ ಬೈಲಿಕ್ಕೆ ಸುರು ಮಾಡಬ್ಯಾಡ್ರಿ. ಅವ್ರ ವಯಸ್ಸಿನವ್ರೆಲ್ಲಾ ರೆಕ್ಕಿ ಬಿಚ್ಚಿ ಹಾರ್‍ಯಾಡುಮುಂದ, ರೆಕ್ಕಿ ಕಟ್ಟಿಹಾಕಿ, ನೀ ಇಲ್ಲೇ ಗೂಡಿನಾಗ ಕೂತು ಉಳದವ್ರು ಹಾರ್‍ಯಾಡೂದನ್ನ ನೋಡು ಅಂದ್ರ ಹ್ಯಾಂಗ? ನಮಗ ಮಕ್ಕಳು ಹತ್ರ ಬೇಕು. ಖರೆ. ಆದರ ಅವರ್‍ದೂ ವಿಚಾರ ಮಾಡಬೇಕಲಾ...'

'ಏ, ಹಾಂಗ ಹೀಂಗ ಎಲ್ಲಾ ನೀನ ಮಾತಾಡತೀಯಲಾ. ಪ್ರತಿ ಹಬ್ಬದಾಗ, ಏನರ ವಿಶೇಷ ಮಾಡಿದಾಗ, ನೀ ಮಕ್ಳು ಮಮ್ಮಕ್ಳು ಅಳೆಂದ್ರನ್ನ ನೆನಸಿ ಸಂಕ್ಟಪಡ್ತಿ. ಏನ ಉಪಯೋಗ ಅದ ಬಿಡು. ಈಗ ನೀ ಊಟಾ ಮಾಡಿ ಮುಗಸು. ಎಲಿ ಒಣಗಲೀಕತ್ತದ'.

ವಾಮನರಾಯರು ಕೈ ತೊಳೆದುಕೊಳ್ಳಲು ಮೇಲೆದ್ದರು. ವಿಮಲಮ್ಮನ ತಲೆಯಲ್ಲಿ ಮಾತ್ರ ಸಂಜೆಯಾದರೂ ಅದೇ ವಿಚಾರ.

ಸಂಜೆ ರಾಯರು ಟೀವಿ ಎದುರು ಕುಳಿತಿದ್ದರು. ಯಾವುದೋ ಇಂಗ್ಲಿಷ್ ಮೂವಿ ನಡೆಯುತ್ತಿತ್ತು. ವಿಮಲಮ್ಮನ ಕೈಯಲ್ಲೊಂದು ಪುಸ್ತಕ. 'ಏ, ಏನ... ಪಿಕ್ಚರ್ ನೋಡಬಾ ಇಲ್ಲೆ. ಒಂದ ಪೆಟಗೀ ಅಂಥಾ ಮಶೀನ್ ಅದ. ಅದರಾಗ ಏನರ ಇಟ್ಟು ಬಟನ್ ಒತ್ತೀದ್ರ, ಜಗತ್ತಿನ ಮತ್ತೊಂದು ತುದಿ ವಳಗಿನ ಇಂಥಾದ್ದ ಮಶೀನದಾಗ ಹೋಗಿ ಬೀಳತದ ಕಣ್ಣು ಮುಚ್ಚಿ ತಗಿಯೂದರಾಗ. ನೋಡ ಬಾ ಇಲ್ಲೆ.' ವಿಮಲಮ್ಮ ಅತ್ತ ಲಕ್ಷ್ಯ ಹರಿಸಿದರು. ನಿಜ. ಆ ಕೆಂಪು ಬಣ್ಣದ, ಗಾಜಿನ ಮುಚ್ಚಳದ ಈಗಿನ ಮೈಕ್ರೊವೇವ್ ಯಂತ್ರದಾಕಾರದ ಪೆಟ್ಟಿಗೆಯಲ್ಲಿ... ಒಬ್ಬಾತ ಒಂದು ಸಂದೇಶ ಬರೆದ ಗುಲಾಬಿ ಬಣ್ಣದ ಕಾಗದದ ಮೇಲೆ ಉಂಗುರವನ್ನಿಟ್ಟು, ಜೊತೆಗೊಂದು ಕೆಂಪು ಗುಲಾಬಿ ಒಂದು ಚೊಕೊಲೇಟ್ ಬಾರ್ ಇರಿಸಿ, ಮುಚ್ಚಳ ಮುಚ್ಚಿ, ಕವಚದ ಮೇಲಿನ ಒತ್ತು ಗುಂಡಿಗಳಲ್ಲಿ ಆ ಕಡೆಯ ಮಶೀನಿನ ಕೋಡ್ ನಂಬರ್ ಒತ್ತಿದ. ಮರುಕ್ಷಣದಲ್ಲೇ ಅವೆಲ್ಲ ಅತ್ತಲಿನ ಮಶೀನಿನಲ್ಲಿ ಪ್ರತ್ಯಕ್ಷವಾಗಿ, ಎಚ್ಚರಿಸುವ ಗಂಟೆ ಮೊಳಗಿತು. ಹೆಣ್ಣೊಬ್ಬಳು ಮುಚ್ಚಳ ತೆರೆದು, ನಗುನಗುತ್ತ ಅವೆಲ್ಲವನ್ನೂ ತೆಗೆದುಕೊಂಡಳು. ಸಂದೇಶವನ್ನೋದುತ್ತ ಗುಲಾಬಿಯನ್ನಾಘ್ರಾಣಿಸಿ,